॥ ಶ್ರೀಮಧ್ವೇಶಾಯನಮಃ ॥

# ಶ್ರೀನರಹರಿತೀರ್ಥರು

ಭೂದೇವೀತನಯಾಸಕ್ತಃ ರಘ್ವೀಶಪದಮಾನಸಃ।
ನೃಹರ್ಯಾಖ್ಯಗುರುರ್ಭೂಯಾದಸ್ಮದಿಷ್ಟಾರ್ಥಸಿದ್ಧಯೇ॥

ಶ್ರೀಆಚಲಾನಂದದಾಸರ ತರುವಾಯ ಹದಿಮೂರನೇ ಶತಮಾನದವರೆಗೆ ಯಾವ ಪ್ರಸಿದ್ಧರಾದ ದಾಸರ ಹೆಸರೂ ದೊರೆಯುವುದಿಲ್ಲ. 18 ನೇ ಶತಮಾನದಲ್ಲಿದ್ದ ವಿಜಯದಾಸರು ಒಂದು ಸುಳಾದಿಯಲ್ಲಿ ಶ್ರೀ ಪುರಂದರದಾಸರಿಗಿಂತ ಪೂರ್ವಕಾಲದಲ್ಲಿ ಎಷ್ಟೋ ಮಂದಿ ಹರಿದಾಸರು ಭಗವಂತನ ಗುಣಗಾಯನಮಾಡಿ ಧನ್ಯರಾದರೆಂದು ಹೇಳಿದ್ದಾರೆ. ಅವರಲ್ಲಿ ಕೆಲವರ ಹೆಸರನ್ನು ಕೊಡುತ್ತಾ ಆಚಲಾನಂದರ ಹೆಸರನ್ನೂ ಅನೇಕ ಆದ್ಯವಂಶಸ್ಥರ ಹೆಸರನ್ನೂ ಕಥನಮಾಡಿದ್ದಾರೆ. ಅವರಿದ್ದ ಕಾಲ ಗೊತ್ತಾಗುವುದಿಲ್ಲ.

ಆದ್ಯದಾಸರುಗಳೆಂದರೆ ಪೂರ್ವದಲ್ಲಿ ಅವರು ಕೇವಲ ಶೈವರಾಗಿದ್ದರು. ಅವರಿಗೆ ಆರಾಧ್ಯ ಬ್ರಾಹ್ಮಣರೆಂಬ ವಾಡಿಕೆಯಿತ್ತು, ಲಿಂಗವನ್ನೂ ಯಜ್ಞೋಪವಿತವನ್ನೂ ಅವರು ಧರಿಸುತ್ತಿದ್ದರು. ಆ ಆರಾಧ್ಯರು ಕಾಲಕ್ರಮದಲ್ಲಿ ಭಾಗವತಧರ್ಮವನ್ನು ಅವಲಂಬಿಸಿ ಅನೇಕರು ಹರಿದಾಸರಾದರು. ಮಧ್ವಾಚಾರ್ಯರ ಕಾಲದಲ್ಲಿ ಆ ವಂಶೀಕರಲ್ಲನೇಕರು ಚಕ್ರಾಂಕನ ಮಾಡಿಸಿಕೊಂಡು ವೈಷ್ಣವರಾಗಿ ಮಹಾಶಾಸ್ತ್ರಪಂಡಿತರಾದರು ಆರಾಧ್ಯ ಎಂಬ ಮಾತು ಕ್ರಮೇಣ ಆದ್ಯ ಎಂಬ ಉಚ್ಚಾರಭೇದವನ್ನು ಪಡೆಯಿತು.

ಆರಾಧ್ಯರ ಪೈಕಿ ಒಮ್ಮೆ ಅರವತ್ತು ಜನರು ಯಾತ್ರಿಕರಾಗಿ ಪ್ರಯಾಣಮಾಡುತ್ತಾ ಪಂಢರಪುರಕ್ಕೆ ಬಂದರಂತೆ ! ಪಂಢರಪುರವು ವಿಷ್ಣುಕ್ಷೇತ್ರವಾಗಿದ್ದುದರಿಂದ ಅವರು ಕ್ಷೇತ್ರವನ್ನು ಪ್ರವೇಶಿಸಲಿಲ್ಲವಂತೆ ! ಭೀಮರಥಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಕಣ್ಣುಬಿಡುವುದರೊಳಗೆ ಅವರೆಲ್ಲರನ್ನೂ ಪಾಂಡುರಂಗನು ತನ್ನ ಗರ್ಭಾಂಕಣದಲ್ಲಿ ನಿಲ್ಲಿಸಿದ್ದನಂತೆ ! ವಿಷ್ಣು ಶಬ್ದವನ್ನು ಸಹ ಉಚ್ಚರಿಸದಿದ್ದ ಅವರಿಗೆ ಪಾಂಡುರಂಗನ ದರ್ಶನವಾದ ಕೂಡಲೆ ಮನಸ್ಸು ಪರಿವರ್ತನವಾಯಿತಂತೆ ! ಅವರೆಲ್ಲರೂ ವಿಷ್ಣು ದ್ವೇಶವನ್ನು ಬಿಟ್ಟು ಹರಿದಾಸರಾದರಂತೆ ! ಒಬ್ಬ ದಾಸರು, ''ಏನು ಮಾಡಿದೆ ಮಾನಭಂಗ । ಜಯಪಾಂಡುರಂಗ'' ಎಂಬ ದೇವರನಾಮದಲ್ಲಿ-

ಮಂಗನಕಿಂತತ್ತಾಯಿತು ಜನ್ಮವು ।
ಲಿಂಗವ ಕಳಕೊಂಡು ಗಂಗೆಯ ತೀರದಿ ।
ಮುಂಗಾಣದಲೆ ಮೌನದೊಳಿರುತಿರೆ ।
ಹಂಗಿಸಿಭವ ನಿನ್ನಂಗವ ತೋರಿ
ಉದ್ಭವಿಸಿ ಬಂದೂರ್ವಿಯೊಳಗೆ ನಾ ।
ಸಿದ್ಧಾಂತದ ಬಗೆ ಪದ್ಧತಿ ತಿಳಿಯದೆ ।
ಅದ್ವೈತ ದ್ವಿಜಾರಾಧ್ಯನಾಗಿರೆ ।
ಉದ್ಧರಿಸಿದೆ ಮಧ್ವಮತದವನೆನಿಸಿ
ಶ್ರೀ ನಿಧಿ ನಿನ್ನ ಯಪಾದವನನಂಬಿದೆ ।
ಮಾನವಮಾನವು ನಿನ್ನಗೊಪ್ಪಿತು ಜಗ ।
ತ್ರಾಣಪ್ರಾಣಪತಿ ವಿಠಲರೇಯ ।
ವೇಣುಭಕುತಿಜ್ಞಾನವೀಯೆನಗಿಂದು

ಎಂಬುದಾಗಿ ಹಾಡಿರುತ್ತಾರೆ.

ಹದಿಮೂರನೇ ಶತಮಾನದಲ್ಲಿ ದಕ್ಷಿಣ ಕನ್ನಡಜಿಲ್ಲೆಯ ಪಾಜಕ ಕ್ಷೇತ್ರದಲ್ಲಿ ಅವತರಿಸಿ, ಭಾಗವತ ಸಂಪ್ರದಾಯಸ್ಥರಾಗಿದ್ದು ಅದ್ವೈತ ವಿಶಿಷ್ಟಾದ್ವೈತಮತಗಳಿಂದ ಪ್ರತ್ಯೇಕವಾದ ದ್ವೈತವೇದಾಂತ ಮತವನ್ನು ಸ್ಥಾಪಿಸಿ ಭಾಷ್ಯಕಾರರೆನಿಸಿದ ಶ್ರೀ ಮನ್ಮಧ್ವಾಚಾರ್ಯರವರು ಭರತ ಖಂಡದಲ್ಲಿ ತಮ್ಮ ಮತವನ್ನು ಪ್ರಚುರಗೊಳಿಸಿ ಪ್ರಖ್ಯಾತರಾದರು. ಆಚಾರ್ಯಾರ ಸಹಸ್ರಾರು ಶಿಷ್ಯರ ಮಧ್ಯದಲ್ಲಿ ಶ್ರೀಪದ್ಮನಾಭತೀರ್ಥರು ಶ್ರೀಮಾಧವತೀರ್ಥರು ಶ್ರೀಅಕ್ಷೋಭ್ಯತೀರ್ಥರೆಂಬ ಯತೀಶ್ವರರು ಕ್ರಮವಾಗಿ ಆಚಾರ್ಯರ ಮಹಾಪೀಠದಲ್ಲಿ ಪಟ್ಟಾಭಿಷಿಕ್ತರಾಗಿ ಮತರಾಜ್ಯವನ್ನು ಪರಿಪಾಲಿಸಿದರು.

ಶ್ರೀಮಧ್ವಾಚಾರ್ಯರಿಂದ ಮೂರನೆಯವರೆನಿಸಿದ ಶ್ರೀನರಹರಿತೀರ್ಥರು ಗೀರ್ವಾಣಭಾಷಾ ಪಾಂಡಿತ್ಯಬಲದಿಂದ ಧರ್ಮಪ್ರಚಾರಮಾಡುವುದರ ಜೊತೆಗೆ ಭಾಗವತಧರ್ಮದ ಕೀರ್ತನಪದ್ಧತಿಯನ್ನೂ ಪುರಸ್ಕರಿಸಿ ಅನೇಕ ಕನ್ನಡ ದೇವರನಾಮಗಳನ್ನು ರಚಿಸಿ ಉಪದೇಶಕೊಡುತ್ತಾ ಬಂದರು. ಇವರ ಈ ಬಗೆಯ ಉಪದೇಶವು ಫಲಕಾರಿಯಾಗಿ ಸಮಾಜದಮೇಲೆ ವಿಶೇಶ ಪರಿಣಾಮವನ್ನು ಉಂಟುಮಾಡಿತು. ಶ್ರೀನರಹರಿತೀರ್ಥರು ಕೇವಲ ದೊಡ್ಡಸನ್ಯಾಸಿಗಳಂತಿರದೆ ವ್ಯವಹಾರವನ್ನೂ ಬಲ್ಲ ರಾಜರ್ಷಿಗಳಾಗಿದ್ದರು.

ಶ್ರೀನರಹರಿತೀರ್ಥರ ಪೂರ್ವಾಶ್ರಮದ ಹೆಸರು ಸ್ವಾಮಿಶಾಸ್ತ್ರಿಗಳೆಂದು. ಇವರು ಒರಿಸ್ಸಾದೇಶದ ಗಜಪತಿಅರಸರಲ್ಲಿ ದಪ್ತರದಾರರಾಗಿದ್ದು ರಾಜ ಪ್ರಜೆಗಳಿರ್ವರಿಂದಲೂ ಸನ್ಮಾನ್ಯರಾಗಿದ್ದರು. ಶಾಸ್ತ್ರಿಗಳು ಷಟ್ಶಾಸ್ತ್ರವಿಶಾರದರಾಗಿದ್ದುದರಿಂದಲೇ ಇವರಿಗಂಥಾ ಗೌರವವುಂಟಾಗಿತ್ತು. ಇವರ ಕಾಲದಲ್ಲಿ ಶ್ರೀಮಧ್ವಾಚಾರ್ಯರು ಬದರೀಯಾತ್ರೆಮಾಡಿ ಒರಿಸ್ಸಾ ರಾಜಧಾನಿಯಲ್ಲಿ ಬಂದಿಳಿದರು. ಆ ಕಾಲದ ಜನರಿಗೆ ಶ್ರೀಮಧ್ವಾಚಾರ್ಯರ ಉಪದೇಶವು ನೂತನವಾಗಿ ಕಂಡುಬಂದ ಕಾರಣ ನರಹರಿತೀರ್ಥರೇ ( ಸ್ವಾಮಿಶಾಸ್ತ್ರಿಗಳೇ ) ಆಚಾರ್ಯರೊಡನೆ ವಾದಭೂಮಿಗಿಳಿದರು. ಕೆಲವುದಿನಗಳ ವಾಕ್ಯಾರ್ಥದಲ್ಲಿ ಶಾಸ್ತ್ರಿಗಳು ಆಚಾರ್ಯರ ಪಾಂಡಿತ್ಯಕ್ಕೂ ಉಪದೇಶಕ್ಕೂ ಮನಸೋತು ಶಿಷ್ಯರಾದರು. ಶಿಷ್ಯರಾದದ್ದು ಮಾತ್ರವಲ್ಲದೆ ಸನ್ಯಾಸ ಗ್ರಹಣವನ್ನೂ ಮಾಡಿದರು. ಸ್ವಾಮಿಶಾಸ್ತ್ರಿಗಳಂಥವರು ಆಚಾರ್ಯರ ಶಿಷ್ಯರಾದ್ದನ್ನು ನೋಡಿ ಆ ರಾಜ್ಯದ ಪಂಡಿತರನೇಕರು ನಿರ್ವಿವಾದವಾಗಿ ದ್ವೈತಮನ್ನವಲಂಬಿಸಿದರು. ಸನ್ಯಾಸಗ್ರಹಣಾನಂತರ ಶ್ರೀನರಹರಿತೀರ್ಥರು ಆಚಾರ್ಯರನ್ನು ಹಿಂಬಾಲಿಸಲು ಯತ್ನಿಸಿದರು. ಆಚಾರ್ಯರಿಗೆ ಆ ಸಮಯದಲ್ಲಿ ಅವರು ಬರುವುದು ಸಮ್ಮತವಾಗಲಿಲ್ಲ . ಗಜಪತಿರಾಜರ ಭಂಡಾರದಲ್ಲಿದ್ದ ಮೂಲ ಸೀತಾರಾಮ ವಿಗ್ರಹಗಳನ್ನು ತಮ್ಮ ಬಳಿಗೆ ತರಿಸಿ ಪೂಜಿಸಬೇಕೆಂಬ ಅಭಿಲಾಷೆಯು ಆಚಾರ್ಯರಿಗಿತ್ತು. ಅದಕ್ಕೆ ತಕ್ಕ ಸಮಯಸನ್ನಿವೇಶಗಳು ಒದಗಿಬಂದಾವೆಂದು ಶ್ರೀನರಹರಿತೀರ್ಥರನ್ನು ಅಲ್ಲೇ ಬಿಟ್ಟು ತಾವು ಪ್ರಯಾಣಮಾಡಿದರು.

ಅತ್ತ ಆಗಿದ್ದ ಗಜಪತಿರಾಜನು ಗರ್ಭಿಣಿಯಾಗಿದ್ದ ಪತ್ನಿಯನ್ನು ಬಿಟ್ಟು ಚಿಕ್ಕವಯಸ್ಸಿನಲ್ಲಿ ಮೃತನಾದನು. ಸಿಂಹಾಸನಪದವಿಗೆ ರಾಜ ದಾಯಾದರಲ್ಲಿ ವಿವಾದವುಂಟಾಯಿತು. ರಾಜ ಬಂಧುಗಳಲ್ಲಿ ಯಾರು ರಾಜರಾಗುವುದೂ ಮಿಕ್ಕವರ್ಯಾರಿಗೂ ಸಮ್ಮತವಾಗಲಿಲ್ಲ. ಕಡೆಗೆ ಪಟ್ಟದಾನೆಯ ಕೈಯಲ್ಲಿ ಪುಷ್ಪಮಾಲಿಕೆಯನ್ನು ಕೊಟ್ಟು ಯಾರ ಕೊರಳಿಗೆ ಹಾಕುವುದೋ ಅವರೇ ರಾಜರಾಗಬೇಕೆಂಬ ತೀರ್ಮಾನವಾಯಿತು. ರಾಜ ಕುಮಾರರಲ್ಲಿ ಪ್ರತಿಯೊಬ್ಬನೂ ತನ್ನ ಕೊರಳಿಗೇ ಆನೆಯು ಮಾಲೆ ಹಾಕಲೆಂದು ಹಂಬಲಿಸುತ್ತಿದ್ದನು. ಆನೆಯು ಎಲ್ಲರನ್ನೂ ಬಿಟ್ಟು ದೂರದಲ್ಲೊಂದು ಕಡೆ ವಿನೋದ ನೋಡುತ್ತಿದ್ದ ಶ್ರೀನರಹರಿತೀರ್ಥರ ಕೊರಳಿಗೆ ಹಾಕಿತು. ಪೂರ್ವಾಶ್ರಮದಿಂದ ರಾಜ್ಯಕ್ಕೆ ಹಿತೈಶಿಗಳಾಗಿ ಪರಮಪೂಜ್ಯರಾಗಿದ್ದ ಶ್ರೀನರಹರಿತೀರ್ಥರು ರಾಜ್ಯಭಾರ ಮಾಡುವುದು ಸರ್ವಸಮ್ಮತವಾಯಿತು.

ರಾಣಿಯ ಗರ್ಭದಲ್ಲಿ ದೈವಾನುಗ್ರಹದಿಂದ ಪುತ್ರಸಂತಾನವಾಗಿ ಎಲ್ಲರಿಗೂ ಸಂತೋಷವಾಯಿತು. ಶ್ರೀನರಹರಿತೀರ್ಥರು ಗಜಪತಿ ರಾಜ್ಯ ಭಾರವನ್ನು ಕ್ರಿ.ಶ. 1263 ರಲ್ಲಿ ವಹಿಸಿದರೆಂದು ಮ॥ಜಿ ವೆಂಕೋಬರಾಯರು ಇಂಡಿಯನ್ ಆಂಟಿಕ್ವೆರಿಯೆಂಬ ಗ್ರಂಥದಲ್ಲಿ ಬರೆದಿರುವರು.(Indian Antiquary, Vol.XLIII ( 1914)

Page 264). ಶ್ರೀನರಹರಿತೀರ್ಥರು ರಾಜಕುಮಾರನು ವಯಸ್ಕನಾಗುವವರಿಗೆ ವಿಚಕ್ಷಣೆಯಿಂದ ರಾಜ್ಯವಾಳಿದರು. ಶ್ರೀಮಧ್ವಾಚಾರ್ಯರ ಆಜ್ಞೆಯಾಗಿದ್ದಂತೆ ಮೂಲರಾಮಸೀತಾ ವಿಗ್ರಹಗಳನ್ನು ರಾಜನಿಂದ ಪಾರಿತೋಷಿಕವಾಗಿ ಸಂಪಾದಿಸಿದರು. ಮತ್ತೆ ಆ ರಾಜ್ಯದಲ್ಲಿರದೆ ಉಡುಪಿಗೆ ಬಂದು ತಾವು ತಂದಿದ್ದ ದೇವತಾಮೂರ್ತಿಗಳನ್ನು ಆಚಾರ್ಯರಿಗೊಪ್ಪಿಸಿದರು. ಆಚಾರ್ಯರು ಆ ವಿಗ್ರಹಗಳನ್ನು 80 ದಿವಸ ಆರಾಧನೆ ಮಾಡಿ ತಮ್ಮ ಸಂಸ್ಥಾನವನ್ನು ಪದ್ಮನಾಭತೀರ್ಥರಿ ಗೊಪ್ಪಿಸಿ ಬದರಿಕಾಶ್ರಮಕ್ಕೆ ಪ್ರಯಾಣಮಾಡಿದರು. ಪದ್ಮನಾಭತೀರ್ಥರು 1324 ನೇ ನವಂಬರ್ ಹದಿನಾರಕ್ಕೆ ಸಲ್ಲುವ ರಕ್ತಾಕ್ಷಿ ಸಂ ll ಕಾರ್ತೀಕ ಬಹುಳ ಚತುರ್ದಶಿಯವರೆಗೆ ಸಂಸ್ಥಾನ ಪಾಲನೆಮಾಡಿದರು. ಅನಂತರ ಶ್ರೀನರಹರಿತೀರ್ಥರಿಗೆ ಪಟ್ಟವಾಯಿತು.

ಹಿಂದೆಯೇ ತಿಳಿಸಿರುವಂತೆ ಧರ್ಮಪ್ರಚಾರಕ್ಕೆ ಭಾಗವತಧರ್ಮದ ಕೀರ್ತನ ಪದ್ಧತಿಗಿವರು ಪುರಸ್ಕಾರವಿತ್ತು ಅನೇಕ ಕನ್ನಡ ದೇವರನಾಮಗಳನ್ನು ಮಾಡಿದರು. ಪ್ರಾಕೃತಭಾಷೆಯಲ್ಲಿ ಧರ್ಮೋಪದೇಶಮಾಡುವ ಪ್ರಚಾರಕ ವರ್ಗವನ್ನು ವ್ಯವಸ್ಥಿತರೀತಿಯಿಂದ ಸಜ್ಜುಗೊಳಿಸಬೇಕೆಂಬ ಸಂಕಲ್ಪವಿವರಿಗಿತ್ತು. ಇವರ ಸಂಕಲ್ಪವು ಇವರ ಕಾಲದಲ್ಲೇ ಫಲಕಾರಿಯಾಗಲಿಲ್ಲ . ಇವರ ಅನಂತರ ಪೀಠಕ್ಕೆ ಬಂದವರು ಗ್ರಂಥರಚನೆ ವಾದಿನಿಗ್ರಹಗಳ ಕಡೆಗೆ ಹೆಚ್ಚು ಗಮನಕೊಡಬೇಕಾಯಿತು. ಹೇಗಾದರೂ ಈ ಮಹನೀಯರ ಉದ್ದೇಶದ ಕಡೆಗೆ ಗೌರವಕೊಟ್ಟು ಪುರಂದರದಾಸರಿಂದ ಪುನರುದ್ಧಾರವಾದ ಭಾಗವತಧರ್ಮಕ್ಕೆ ಈ ಪುಣ್ಯಪುರುಷರೇ ಕಾರಣರೆಂದು ಇವರಿಗೆ ಹರಿದಾಸ ಪೀಳಿಗೆಯಲ್ಲಿ ಅಗ್ರಸ್ಥಾನವನ್ನು ಕೊಟ್ಟಿರುತ್ತಾರೆ.

ಶ್ರೀನರಹರಿತೀರ್ಥರು ಅನೇಕ ಕನ್ನಡ ದೇವರನಾಮಗಳನ್ನು ರಚಿಸಿದರೆಂಬ ಪ್ರತೀತಿಯಿದ್ದರೂ ನಮ್ಮ ದೃಷ್ಟಿಗೆ ಗೋಚರವಾಗಿರುವುದು ''ಎಂತು ಮರುಳಾದೆ '' ಮೊದಲಾದ ಕೆಲವು ದೇವತನಾಮಗಳು ಮಾತ್ರ. ಈ ನಾಮಗಳೂ ಹಾಡುವರ ಲೋಪದಿಮದ ಎಷ್ಟೆಷ್ಟು ಬದಲಾವಣೆಯಾಗಿರಬಹುದೊ? ಪದಗಳ ಧೋರಣೆಯನ್ನು ನೋಡಿದರೆ ಬಲು ನುರಿತ ಕವಿತೆಯಂತೆ ಕಾಣುತ್ತದೆ. ವಾಚಕರ ಪರಿಚಯಕ್ಕೆ ಎರಡು ಪದಗಳನ್ನು ಮಾತ್ರ ಕೊಡುವೆನು. ಹದಿಮೂರನೇ ಶತಮಾನದ ಕನ್ನಡ ಪದಗಳು ಹದಿನಾರನೇ ಶತಮಾನದ ಭಾಷೆಯಂತೆ ಕಾಣುವುವು. ಭಾಷಾಶಾಸ್ತ್ರಜ್ಞರು ಪದಗಳನ್ನು ನೋಡಿ ಏನೆನ್ನುವರೊ ?

## ಶ್ರೀಪುರಂದರದಾಸರಿಂದ ವಿರಚಿತ
## ಶ್ರೀನರಹರಿತೀರ್ಥರ ಸ್ತೋತ್ರಪದ

ರಾಗ —ಮುರಾರಿ ಝಂಪೆತಾಳ

ನರಹರಿತೀರ್ಥರ ಮಹಿಮೆಕೇಳಿರೊ
ನರದೇಹವನ್ನು ಸಾರ್ಥಕಮಾಡಿರೋ ll ಪ ll
ಕಾರ್ಯಸ್ಥಬ್ರಹ್ಮಪೂಜಿಸಿಕೊಡಲು
ಆರ್ಯಜಾಬಾಲಮುನಿಗೆ ಪ್ರಸನ್ನನಾಗಿ
ಭಾರ್ಯಸಹಿತ ಶರ್ವಪೂಜಿಸಿ ಸೌಭರಿಗೆ ಕೊಡೆ
ಸೂರ್ಯವಂಶಕೆ ರಾಮಸೀತೆ ಬರಲು ll 1 ll
ಜಾಂಬವಂತನು ಪೂಜಿಸಿ ವೇದಗರ್ಭಗೆ ಕೊಡಲು
ಕುಂಭೇಶ್ವರನ ಕೋಶದಲ್ಲಿ ಇರಲು
ಅಂಬುಜೋದ್ಭವನಲ್ಲಿ ನಿತ್ಯಪೂಜಿಸುತಿರಲು

ಜಂಭಾರಿಪುರನೈದಿದನು ಆ ಜನಪ ॥ 2 ॥
ಗುರು ಆನಂದತೀರ್ಥರಿಂದ ಚತುರಾಶ್ರಮಸ್ವೀಕರಿಸಿ
ವರಗಗನನದಿತೀರದಿ ಗುಹ್ಯದೊಳಿರಲು
ಕರಿಬಂದು ಕೂಗುತಿರೆ ಕೇಳಿ ಹೊರಗೆ ಬರಲು
ಭರದಿ ಪಟ್ಟಭಿಷಿಕ್ತನಾಗಿ ರಾಷ್ಟ್ರದೊಳೊಪ್ಪಿದ ॥ 3 ॥
ಆ ದೇಶಪದವಿ ಹನ್ನೆರಡುವರುಷ ಮೂರುಮಾಸ
ಮೋದದಿಂದನುಭವಿಸಿ ರಾಜಪದವ
ಸಾದರದಿ ಪಿಂಗಾಶ್ವಿಜಶುದ್ಧಸಪ್ತಮಿ
ಆ ಧರಿಯ ರಾಜಪುತ್ರಗೆ ಯಿತ್ತಮಹಿಮ ॥ 4 ॥
ರಾಜಪುತ್ತಪತ್ನಿ ನಿಮಗೆ ಬೇಕಾದವಸ್ತುವೈವದೆನಲು
ಆ ಜನಪನ ಕೋಶದಲ್ಲಿ ಮಂದಾಸನದೊಳು
ರಾಜಿಸುತಿಪ್ಪ ಸೀತಾರಾಮಮೂರ್ತಿಗಳನು ತೆಗೆದುಕೊಂಡು
ವಾಜಿಯನೇರಿ ಕೂರ್ಮಕ್ಕೆ ಬಂದು ಪದ್ಮನಾಭರಿಗಿತ್ತನು ॥ 5 ॥
ಪದುಮನಾಭಯತಿ ತಾನು ದಶಮತಿಗೆ ಅರ್ಪಿಸಲು
ಮುದದಿ ಮೂರುಮಾಸದಿ ಹರಿಮೂರುದಿನವು
ಮದನನಯ್ಯನ ಪೂಜಿಸಿಕೊಡಲು ತಾಂ ಪೂಜಿ-
ಸಿದ ಆರುವರುಷ ಇನ್ನೂರುತೊಂಭತ್ತುದಿನ ॥ 6 ॥
ಗುರುಪದ್ಮನಾಭರಾಜ್ಞದಲ್ಲಿಂದ ಒಂಭತ್ತು
ವರುಷ ಮ್ಯಾಲೈವತ್ತುಮೂರುದಿನವು
ಧರಣಿಜೆಯ ಮೂಲರಾಮನಂಘ್ರಿಯ ಭಜಿಸಿ
ಪುರಂದರವಿಠಲನ ಪ್ರೀತಿಪಡೆದ ॥ 7 ॥

॥ ಶ್ರೀನರಹರಿತೀರ್ಥಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥

ಆಧಾರ : ಶ್ರೀಕರ್ನಾಟಕ ಭಕ್ತಿವಿಜಯ ದ್ವಿತೀಯ ಮುದ್ರಣ.
ಪ್ರಕಾಶಕರು : ಶ್ರೀ ಬೇಲೂರು ಕೇಶವದಾಸರು.